58ನೆಯ ವಯಸ್ಸಿನಲ್ಲಿ ತೀರಿಕೊಂಡ ಇಂಗ್ಲಿಷ್ ಕವಿ ಅಜಿತನ್ ಜಿ. ಕುರುಪ್ ಬರೆದದ್ದು ಜೀವಂತ ಕಾವ್ಯವನ್ನು. ಅವರಿದ್ದಾಗ ಪ್ರಕಟವಾಗಿದ್ದು ಕೇವಲ ಒಂದೇ ಸಂಕಲನ. ಇತ್ತೀಚೆಗೆ ಪೋಯೆಟ್ರಿವಾಲ್ ಮೀಡಿಯಾದವರು 1980–1987ರ ಅವಧಿಯಲ್ಲಿ ಅವರು ಬರೆದ ಕೆಲವು ಕವನಗಳನ್ನು ಆಯ್ದು ಎರಡನೇ ಸಂಕಲನ ಪ್ರಕಟಿಸಿದ್ದಾರೆ. ಭಾರತೀಯ ಇಂಗ್ಲಿಷ್ ಕಾವ್ಯದ ದಿಗ್ಗಜರೆಲ್ಲ ಈ ಕವಿತೆಗಳಿಗೆ ಬೆರಗಾಗಿದ್ದಾರೆ. ಈ ವಿಶಿಷ್ಟ ಕವಿಯ ಕಾವ್ಯದ ಕುರಿತ ಅನನ್ಯ ನೋಟ ಈ ಬರಹದಲ್ಲಿದೆ

ನೀವು ಮುಂಜಾನೆ ಇನ್ನೂ ಕತ್ತಲಿರುವಾಗ ಹಾಸಿಗೆ ಬಿಟ್ಟೇಳುತ್ತೀರಿ. ಕೋಣೆಯಲ್ಲಿ ಎರಡು ಹೆಜ್ಜೆ ಇಡುವಷ್ಟರಲ್ಲಿ ಮೇಲ್ಛಾವಣಿಯಿಂದ ತನ್ನ ಎಂಜಲಿನ ದಾರ ಬಿಟ್ಟು ಇಳಿಯುತ್ತಿದ್ದ ಪುಟ್ಟ ಜೇಡದ ಮರಿಯ ಅಂಟು ಎಳೆ ನಿಮ್ಮ ಮುಖ ಮೂತಿಗೆಲ್ಲ ಅಂಟಿಕೊಳ್ಳುತ್ತದೆ. ತಡವಿದರೆ ಕೈಗೆ ಸಿಗದ, ತೆಗೆದು ಎಸೆಯಲಾರದ ದಾರ ಅದು. ಬಲೆಯನ್ನೇನೂ ಕಟ್ಟಿಲ್ಲ ಅದು. ಆದರೆ ನಿಮ್ಮ ಮೈಗಂಟಿದ ಅದನ್ನು ಈಗ ತೊಡೆಯುವುದು ಅಗತ್ಯ. ಆಗುವುದಿಲ್ಲ. ಎಂಥ ಅಸಹಾಯಕತೆ ನಿಮ್ಮದು. ಕವಿತೆಯ ಹೆಸರು ಅದು; ಕಟ್ಟದ ಬಲೆಯ ಅಂಟಿನಂಟು.

ಕವಿ, ಅಜಿತನ್ ಜಿ ಕುರುಪ್. 2015ರಲ್ಲಿ, ತಮ್ಮ 58ನೆಯ ವಯಸ್ಸಿನಲ್ಲಿ ಕೊನೆಯುಸಿರೆಳೆದ ಈ ಕವಿ ಬರೆದಿದ್ದು ತೀರ ಕಡಿಮೆ. ಅದರಲ್ಲೂ ಬದುಕಿದ್ದಾಗ ಪ್ರಕಟವಾಗಿದ್ದು ಕೇವಲ ಒಂದೇ ಒಂದು ಸಂಕಲನ. ಮೊನ್ನೆ ಮೊನ್ನೆಯಷ್ಟೇ ಪೋಯೆಟ್ರಿವಾಲ್ ಮೀಡಿಯಾದವರು 1980–1987ರ ಅವಧಿಯಲ್ಲಿ ಇವರು ಬರೆದ ಕೆಲವು ಕವನಗಳನ್ನು ಆಯ್ದು ಎರಡನೇ ಸಂಕಲನ ಹೊರತಂದಿದ್ದಾರೆ. (**A Fistful Of Twilight** ಮತ್ತು **The Metaphysics Of The Tree Frog's Silence**). ಆದರೆ ಭಾರತೀಯ ಇಂಗ್ಲೀಷ್ ಕಾವ್ಯದ ದಿಗ್ಗಜರೆಲ್ಲ ಇವರ ಕವಿತೆಗಳೆದುರು ಬೆರಗಾಗಿದ್ದಾರೆಂದರೆ ಅದು ಅತಿಶಯೋಕ್ತಿಯಂತೂ ಅಲ್ಲ. ಬದುಕಿದ್ದಾಗ ಇವರ ಕವಿತೆಗಳನ್ನು ಓದಿ ಸಂಭ್ರಮಿಸಲಿಲ್ಲ ಎಂದು ಕಂಬನಿ ಮಿಡಿಯುತ್ತ ಜೀತ್ ಥಾಯಿಲ್ ಬರೆಯುತ್ತಾರೆ, 'ಯಾವುದನ್ನು ಭಾಷೆಯಲ್ಲಿ ಹಿಡಿಯಲಾಗದೋ ಅದನ್ನು ಬರೆದ ಈ ಕವಿಯನ್ನು ಅನುಕರಿಸಲಾಗದು; ಬಿಟ್ಟು ಹೋದ ಶೂನ್ಯವನ್ನು ಇನ್ಯಾರೂ ತುಂಬಲಾಗದು. ಅವರನ್ನು ಕೇವಲ ಮೆಚ್ಚಿಕೊಳ್ಳುವುದಷ್ಟೇ ಈಗ ನಮ್ಮಿಂದ ಸಾಧ್ಯ.'

ಭಾರತೀಯ ಇಂಗ್ಲಿಷ್ ಕಾವ್ಯದ ಅಧ್ವರ್ಯು ಆದಿಲ್ ಜಸ್ವಾಲ್ ಅವರಂತೂ ಬದುಕಿದ್ದಾಗ ಇವರ ಕವನ ಸಂಕಲನವನ್ನು ಪ್ರಕಟಿಸಲಾಗದೇ ಹೋದ ಬಗ್ಗೆ ಮರುಗಿದ್ದಾರೆ. ತಾವು ಯಾರೊಬ್ಬ ಕವಿಯ ಕವಿತೆಗಳನ್ನು ಓದುವಾಗ ಕೂಡ ನಿಘಂಟಿನ ಬಳಕೆ ಇಷ್ಟೊಂದು ಮಾಡಿರಲಿಲ್ಲ ಎನ್ನುವ ಜಸ್ವಾಲ್, ತೀರ ತೀರ ತಡವಾಗಿ ತಾವು ಕುರುಪ್ ಅವರಿಗೆ ತಮ್ಮ ಪ್ರಾಸ್ತಾವಿಕ ಮಾತುಗಳ ಕಾಣಿಕೆ ಸಲ್ಲಿಸುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಕುರುಪ್ ಅವರ ವಿಶಿಷ್ಟ ಪ್ರೌಢಿಮೆ ಮತ್ತು ಭಾಷೆಯ ಸೊಗಡನ್ನು ತಾವು ಸವಿಯುವುದಕ್ಕೆ ಅಗತ್ಯವಿರುವಷ್ಟು ಪಕ್ವರಾಗುವ ಮೊದಲೇ ಅವರು ತಮ್ಮ ಅಸ್ತಿತ್ವವನ್ನು ಪ್ರಕಟಪಡಿಸಿದರೇನೋ, ತಮ್ಮ ಕಾಣಿಕೆಯೂ ಅಷ್ಟೇ ತಡವಾಗಿ ಬಿಟ್ಟಿತು ಎಂದಿರುವ ಅವರ ಮಾತು ಕುರುಪ್ ಅವರ ಕವಿತೆಗಳ ಗುರುತ್ವವನ್ನಷ್ಟೇ ಸೂಚಿಸುತ್ತಿದೆ.